# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಸಂಖ್ಯೆ: ಕರಾಮುವಿ/ಡೀನ್(ಶೈ)/04/80903/2018-19 ದಿನಾಂಕ: 16-09-2025

## ಕಚೇರಿ ಆದೇಶ

**ವಿಷಯ:** ಯುಜಿಸಿಯ ಸಾರ್ವಜನಿಕ ತಿಳುವಳಿಕೆ ಪತ್ರದನ್ವಯ 2025-26ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯಿಂದ ಆರೋಗ್ಯ ಸೇವೆ ಮತ್ತು ಸಂಬಂಧಿತ ವಿಭಾಗಗಳ ಕೋರ್ಸ್ ಹಾಗೂ ವಿಶೇಷತೆಯ ಕಾರ್ಯಕ್ರಮಗಳ ODL ಮತ್ತು ಆನ್‌ಲೈನ್ ಪ್ರವೇಶಾತಿಯನ್ನು ರದ್ದುಪಡಿಸುವ ಬಗೆಗೆ.

**ಉಲ್ಲೇಖ:**
1. ವಿವಿ ಪ್ರವೇಶಾತಿ ಅಧಿಸೂಚನೆ ಸಂಖ್ಯೆ:ಕರಾಮುವಿ/ಪ್ರವಿ/ಎಡಿಎಂ-1/143/25-26, ದಿನಾಂಕ: 25.06.2025
2. ಯುಜಿಸಿಯ ಸಾರ್ವಜನಿಕ ತಿಳುವಳಿಕೆ ಪತ್ರ ಸಂಖ್ಯೆ: F.No.4-1/ 2025(DEB-NER), Dtd.: 12-08-2025
3. 36ನೇ ವಿಶೇಷ ಶೈಕ್ಷಣಿಕ ಮಂಡಳ ಸಭೆಯ ತೀರ್ಮಾನ ದಿನಾಂಕ: 18-08-2025
4. ಯುಜಿಸಿಯ-ಡಿಇಬಿ Portal ನಲ್ಲಿ ಮಾನ್ಯತೆ ಕುರಿತು ಪ್ರಕಟಿಸಿರುವ ಪಟ್ಟಿ
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:16-09-2025

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2025-26ನೇ ಶೈಕ್ಷಣಿಕ ಸಾಲಿನ (ಜುಲೈ) ಆವೃತ್ತಿಯ ಪ್ರವೇಶಾತಿಯನ್ನು ಉಲ್ಲೇಖ(1)ರ ಅಧಿಸೂಚನೆಯನ್ವಯ ದಿನಾಂಕ: 01.07.2025ರಿಂದ ಪ್ರಾರಂಭಿಸಲಾಗಿರುತ್ತದೆ. ಈ 2025-26ನೇ ಶೈಕ್ಷಣಿಕ ಸಾಲಿನ (ಜುಲೈ) ಆವೃತ್ತಿಯಿಂದ ಆರೋಗ್ಯ ಸೇವೆ ಹಾಗೂ ವಿಶೇಷತೆಯ ವಿಷಯಗಳ ಕಾರ್ಯಕ್ರಮಗಳಾದ ಸೂಕ್ಷ್ಮ ಜೀವಶಾಸ್ತ್ರ, ಮನೋವಿಜ್ಞಾನ, ಆಹಾರ ಮತ್ತು ಪೌಷ್ಠಿಕ ವಿಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಕ್ಲಿನಿಕಲ್ ನ್ಯೂಟ್ರಿಷನ್ & ಡಯಟೆಟಿಕ್ಸ್ ಶಿಕ್ಷಣಕ್ರಮಗಳನ್ನು ಹಾಗೂ ಸದರಿ ವಿಷಯಗಳ ಸಂಬಂಧಿತ ವಿಶೇಷತೆಯ ಕಾರ್ಯಕ್ರಮಗಳನ್ನು ನಡೆಸದಂತೆ, ಯುಜಿಸಿಯು ಉಲ್ಲೇಖ(2)ರ ಸಾರ್ವಜನಿಕ ತಿಳುವಳಿಕೆ ಪತ್ರದಲ್ಲಿ ತಿಳಿಸಲಾಗಿತ್ತು, ಈ ಸಂಬಂಧ ಉಲ್ಲೇಖ(3)ರ ಶೈಕ್ಷಣಿಕ ಮಂಡಳ ಸಭೆಯಲ್ಲಿ ಸದರಿ ವಿಷಯಗಳ ODL ಮತ್ತು ಆನ್‌ಲೈನ್ ಪ್ರವೇಶಾತಿಯನ್ನು ರದ್ದುಪಡಿಸಲು ತೀರ್ಮಾನಿಸಲಾಗಿದ್ದು, ಅದರಂತೆ ಕ್ರಮವಹಿಸಲು ತಿಳಿಸಲಾಗಿದೆ.

ಮುಂದುವರೆದು, ಯುಜಿಸಿ-ಡಿಇಬಿಯು ತನ್ನ Portalನಲ್ಲಿ ಪ್ರಕಟಣೆಗೊಳಿಸಿರುವ ವಿಶ್ವವಿದ್ಯಾನಿಲಯಗಳ ಹಾಗೂ ಶಿಕ್ಷಣಕ್ರಮಗಳ ಮಾನ್ಯತೆ ಪಟ್ಟಿಯಲ್ಲಿ ಕರಾಮುವಿಗೆ ಸಂಬಂಧಿಸಿದ ಶೈಕ್ಷಣಿಕ ಕಾರ್ಯಕ್ರಮಗಳ ಪಟ್ಟಿಯಲ್ಲಿ ಜೀವ ರಸಾಯನಶಾಸ್ತ್ರವನ್ನು ಕೈಬಿಡಲಾಗಿದೆ. ಸದರಿ ಕಾರ್ಯಕ್ರಮದ ಪ್ರವೇಶಾತಿಯನ್ನು ರದ್ದುಪಡಿಸಲು ಹಾಗೂ ಈಗಾಗಲೇ ಮೇಲ್ಕಂಡ ವಿಷಯಗಳಿಗೆ ಹಾಗೂ ಸಂಬಂಧಿತ ವಿಶೇಷತೆಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಬೇರೆ ವಿಷಯವನ್ನು ಆಯ್ಕೆಮಾಡಿಕೊಳ್ಳಲು ಅಥವ ಪ್ರವೇಶಾತಿ ಶುಲ್ಕವನ್ನು ಮರುಭರಿಕೆ ಮಾಡುವ ಸಂಬಂಧ ಹಣಕಾಸು ಸಮಿತಿ ಸಭೆಯ ಹಾಗೂ ವ್ಯವಸ್ಥಾಪನಾ ಮಂಡಳ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ, ಈ ಕೆಳಕಂಡಂತೆ ಕ್ರಮವಹಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಕಚೇರಿ ಆದೇಶ ಹೊರಡಿಸಲಾಗಿದೆ.

M.Sc-Psychology, M.Sc-Microbiology, M.Sc-Biotechnology, M.Sc-Clinical Nutrition & Ditetics, M.Sc-Food & Nutrition science and M.Sc-Biochemistry ಶಿಕ್ಷಣಕ್ರಮಗಳನ್ನು ಮತ್ತು ಸದರಿ ವಿಷಯಕ್ಕೆ ಸಂಬಂಧಿಸಿದ specialization ಬಿ.ಎ.ಕಾರ್ಯಕ್ರಮದಲ್ಲಿ ಸೈಕಾಲಜಿ ಐಚ್ಛಿಕ ವಿಷಯ ಮತ್ತು PGC ND, UG Diploma in NHE & UG Certificate in N&F ಶೈಕ್ಷಣಿಕ ಕಾರ್ಯಕ್ರಮಗಳನ್ನು ತಕ್ಷಣದಿಂದ ಜಾರಿಗೆ ಬಂದಂತೆ 2025-26ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿಯನ್ನು ಸ್ಥಗಿತಗೊಳಿಸಲಾಗಿದೆ. ಸದರಿ ವಿಷಯಗಳಿಗೆ ಈಗಾಗಲೇ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ಕ್ರಮವಹಿಸಲು ಆದೇಶಿಸಿದೆ.

(i) ಎಂಎಸ್ಸಿ ವಿದ್ಯಾರ್ಥಿಗಳಿಗೆ ಎಂ.ಎಸ್ಸಿಯಲ್ಲಿ ಲಭ್ಯವಿರುವ ಇತರೆ ಉಳಿದ 12 ವಿಷಯಗಳಲ್ಲಿ ಯಾವುದಾರೊಂದು ಅರ್ಹ ಕೋರ್ಸ್‌ಅನ್ನು ಅಥವಾ ವಿದ್ಯಾರ್ಥಿ ಬಯಸುವ ಇತರೆ ಕೋರ್ಸನ್ನು (ಶೈಕ್ಷಣಿಕ ವಿದ್ಯಾರ್ಹತೆಗೆ ಒಳಪಟ್ಟು) ಆಯ್ಕೆ ಮಾಡಿಕೊಳ್ಳಲು ವಿದ್ಯಾರ್ಥಿಗೆ ಅವಕಾಶ ಕಲ್ಪಿಸಿ ಪ್ರವೇಶಾತಿ ನೀಡುವುದು.

(ii) ಬಿ.ಎಸ್ಸಿ (ಜನರಲ್) ಶೈಕ್ಷಣಿಕ ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆದು BcBMi, CBMi, BcMiFs, CMiEs, BcMiEs, BcZEs, BcBEs, & BcBZ ಕಾಂಬಿನೇಷನ್ಸ್ ಆಯ್ಕೆ ಮಾಡಿದ್ದಲ್ಲಿ ಲಭ್ಯವಿರುವ ಇತರೆ 5 (PCM, PMCs, CBZ, CZEs, CBEs) ಕಾಂಬಿನೇಷನ್ಸ್‌ಗಳಲ್ಲಿ ಒಂದು ಕಾಂಬಿನೇಷನ್ ಅನ್ನು ಅಥವಾ ವಿದ್ಯಾರ್ಥಿ ಬಯಸುವ ಇತರೆ ಕೋರ್ಸನ್ನು (ಶೈಕ್ಷಣಿಕ ವಿದ್ಯಾರ್ಹತೆಗೆ ಒಳಪಟ್ಟು) ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿ ಪ್ರವೇಶಾತಿ ನೀಡುವುದು.

(iii) ಬಿ.ಎ. ಶೈಕ್ಷಣಿಕ ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆದು ಸೈಕಾಲಜಿ ವಿಷಯವನ್ನು ಒಂದು ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದಲ್ಲಿ ಲಭ್ಯವಿರುವ ಇತರೆ 12 ಐಚ್ಛಿಕ ವಿಷಯಗಳಲ್ಲಿ ಒಂದನ್ನು ಐಚ್ಛಿಕ ವಿಷಯವಾಗಿ ಅಥವಾ ವಿದ್ಯಾರ್ಥಿ ಬಯಸುವ ಇತರೆ ಕೋರ್ಸನ್ನು (ಶೈಕ್ಷಣಿಕ ವಿದ್ಯಾರ್ಹತೆಗೆ ಒಳಪಟ್ಟು) ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿ ಪ್ರವೇಶಾತಿ ನೀಡುವುದು.

(iv) ಪಿಜಿಸಿ ಇನ್ ನ್ಯೂಟ್ರಿಷನ್ ಅಂಡ್ ಡಯಟೆಟಿಕ್ಸ್ ಕಾರ್ಯಕ್ರಮಕ್ಕೆ ಪ್ರವೇಶಾತಿ ಹೊಂದಿದ್ದಲ್ಲಿ ಲಭ್ಯವಿರುವ 13 ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳಲ್ಲಿ ಒಂದನ್ನು ವಿದ್ಯಾರ್ಥಿ ಬಯಸುವ ಇತರೆ ಕೋರ್ಸನ್ನು (ಶೈಕ್ಷಣಿಕ ವಿದ್ಯಾರ್ಹತೆಗೆ ಒಳಪಟ್ಟು) ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿ ಪ್ರವೇಶಾತಿ ನೀಡುವುದು.

(v) ಯುಜಿಡಿ ಇನ್ ನ್ಯೂಟ್ರಿಷನ್ ಹೆಲ್ತ್ ಎಜುಕೇಷನ್ ಕಾರ್ಯಕ್ರಮಕ್ಕೆ ಪ್ರವೇಶಾತಿ ಹೊಂದಿದ್ದಲ್ಲಿ ಲಭ್ಯವಿರುವ 09 ಯುಜಿ ಡಿಪ್ಲೋಮಾ ಕಾರ್ಯಕ್ರಮಗಳಲ್ಲಿ ಒಂದನ್ನು ಅಥವಾ ವಿದ್ಯಾರ್ಥಿ ಬಯಸುವ ಇತರೆ ಕೋರ್ಸನ್ನು (ಶೈಕ್ಷಣಿಕ ವಿದ್ಯಾರ್ಹತೆಗೆ ಒಳಪಟ್ಟು) ವಿದ್ಯಾರ್ಥಿಗೆ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿ ಪ್ರವೇಶಾತಿ ನೀಡುವುದು.

(vi) ಯುಜಿಸಿ ಇನ್ ನ್ಯೂಟ್ರಿಷನ್ ಅಂಡ್ ಫುಡ್ ಕಾರ್ಯಕ್ರಮಕ್ಕೆ ಪ್ರವೇಶಾತಿ ಹೊಂದಿದ್ದಲ್ಲಿ ಲಭ್ಯವಿರುವ 04 ಯುಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳಲ್ಲಿ ಒಂದನ್ನು ಅಥವಾ ವಿದ್ಯಾರ್ಥಿ ಬಯಸುವ ಇತರೆ ಕೋರ್ಸನ್ನು (ಶೈಕ್ಷಣಿಕ ವಿದ್ಯಾರ್ಹತೆಗೆ ಒಳಪಟ್ಟು) ವಿದ್ಯಾರ್ಥಿಗೆ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿ ಪ್ರವೇಶಾತಿ ನೀಡುವುದು.

(vii) Open Elective ಆಗಿ ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬೇಕಾದ ಶೈಕ್ಷಣಿಕ ಕಾರ್ಯಕ್ರಮಗಳ ಪ್ರಕರಣಗಳಲ್ಲಿಯೂ, ಮೇಲಿನ ವಿಷಯಗಳನ್ನು Open Elective ಆಗಿ ಆಯ್ಕೆ ಮಾಡಿಕೊಂಡಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಲಭ್ಯವಿರುವ ಇತರೆ Open Elective ವಿಷಯಗಳಿಗೆ ಬದಲಾವಣೆ ಮಾಡಕೊಳ್ಳತಕ್ಕದ್ದು.

(viii) ಮೇಲಿನ ಬದಲಾವಣೆಗಳಲ್ಲಿ {ಕ್ರ.ಸಂ: (i) ರಿಂದ (Vi) ರಂತೆ} ಪ್ರವೇಶಾತಿ ಶುಲ್ಕ ಪಾವತಿಯಲ್ಲಿ ವ್ಯತ್ಯಾಸ ಬಂದಲ್ಲಿ ವ್ಯತ್ಯಾಸದ ಶುಲ್ಕವನ್ನು ವಿದ್ಯಾರ್ಥಿಯಿಂದ ಪಾವತಿಸಿಕೊಳ್ಳುವುದು. ವಿವಿ ನಿಲಯದಿಂದಲೇ ನೀಡಬೇಕಾದ ಪ್ರಕರಣಗಳಲ್ಲಿ ಮೇಲಿನಂತೆ ಕ್ರಮವಹಿಸುವುದು.

(ix) ಈ ಮೇಲಿನ ಕ್ರ.ಸಂ: (i) ರಿಂದ (Vi)ರಂತೆ ಬದಲಾವಣೆ ಬಯಸದೇ ಇರುವ ಪ್ರಕರಣಗಳಲ್ಲಿ ವಿದ್ಯಾರ್ಥಿಯು ವಿವಿ ನಿಲಯಕ್ಕೆ ಪಾವತಿಸಿರುವ ಸಂಪೂರ್ಣ ಪ್ರವೇಶಾತಿ ಶುಲ್ಕವನ್ನು ವಿದ್ಯಾರ್ಥಿಗೆ ಮರುಪಾವತಿ ಮಾಡುವುದು.

(x) ಪ್ರವೇಶಾತಿಗಾಗಿ ಪ್ರಾಥಮಿಕವಾಗಿ ಪ್ರೋಸೆಸಿಂಗ್ ಮಾಡಿದ್ದ ಸಂದರ್ಭದಲ್ಲಿ ವಿದ್ಯಾರ್ಥಿ ಬಯಸುವ ಇತರೆ ಕೋರ್ಸನ್ನು (ಶೈಕ್ಷಣಿಕ ವಿದ್ಯಾರ್ಹತೆಗೆ ಒಳಪಟ್ಟು) ಆಯ್ಕೆ ಮಾಡಿಕೊಳ್ಳಲು ವಿದ್ಯಾರ್ಥಿಗೆ ಅವಕಾಶ ಕಲ್ಪಿಸಿ ಪ್ರವೇಶಾತಿ ನೀಡುವುದು.

1. ಮೇಲಿನ ವಿಷಯಗಳಿಗೆ ಪ್ರವೇಶಾತಿಗೆ ಅರ್ಜಿ ಸಲ್ಲಿಸಿರುವ ಅಲ್ಪ ಸಂಖ್ಯಾತರ ವರ್ಗದ ವಿದ್ಯಾರ್ಥಿಗಳ ಪ್ರಕರಣಗಳಲ್ಲಿಯೂ ಕ್ರಮ ಸಂಖ್ಯೆ (i) ರಿಂದ (Vii) ರಂತೆ ಕ್ರಮವಹಿಸಿ. ಈ ಮೇಲಿನ ವಿಷಯಗಳಲ್ಲಿ ಆಗುವ ಪ್ರತೀ ಬದಲಾವಣೆಗಳ ಸಂಪೂರ್ಣ ವಿವರವನ್ನು ಅಲ್ಪ ಸಂಖ್ಯಾತರ ನಿರ್ದೇಶನಾಲಯಕ್ಕೆ ವಿದ್ಯಾರ್ಥಿಯ ಪ್ರವೇಶಾತಿ ನಂತರ ಸಲ್ಲಿಸುವುದು.

2. ಅಲ್ಪ ಸಂಖ್ಯಾತರ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ ನಿಗದಿತ ಅನುದಾನಕ್ಕೆ ಸೀಮಿತವಾಗಿ ಪ್ರವೇಶಾತಿ ಮಾಡುವ ಪ್ರಮೇಯ ಉದ್ಭವವಾದಲ್ಲಿ ಅಂತಹ ಸಂದರ್ಭದಲ್ಲಿ – ಈ ಮೊತ್ತಕ್ಕೆ ಇಲಾಖೆಯು ನೀಡುವ ಶೈಕ್ಷಣಿಕ ಕಾರ್ಯಕ್ರಮವಾರು ಸಂಖ್ಯೆಗೆ ಅನುಗುಣವಾಗಿ ಹಾಗೂ ಅವರ ಸೂಚನೆಯಂತೆ ಅರ್ಹ ವಿದ್ಯಾರ್ಥಿಗಳನ್ನು ಮೆರಿಟ್ (ಆಯಾ ಶೈಕ್ಷಣಿಕ ಕಾರ್ಯಕ್ರಮಗಳಿಗೆ ನಿಗದಿಯಾಗಿರುವ ಕನಿಷ್ಠ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳು {ದರ್ಜೆ ಘೋಷಣೆಗೆ ಪರಿಗಣಿಸಲ್ಪಟ್ಟಿರುವ ಅಂಕಗಳು}) ಆಧಾರದ ಮೇಲೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ರಚಿಸಲ್ಪಡುವ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡುವುದು.

ಆದೇಶದ ಮೇರೆಗೆ

ಕುಲಸಚಿವರು

ಗೆ:

1. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
2. ನಿರ್ದೇಶಕರು/ಉಪಕುಲಸಚಿವ ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
3. ಅಧ್ಯಕ್ಷರು, ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು.
4. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ, ಪ್ರಾದೇಶಿಕ ಕೇಂದ್ರ.
5. ಉಪಕುಲಸಚಿವರು, ಸಿದ್ಧಪಾಠ ವಿಭಾಗ, ಕರಾಮುವಿ, ಮೈಸೂರು.

ಪ್ರತಿ :

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು(ಪ್ರಾದೇಶಿಕ ಕೇಂದ್ರಗಳಿಗೆ ಮಾಹಿತಿ ಒದಗಿಸುವುದು)
3. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ, ಕರಾಮುವಿ, ಮೈಸೂರು.
4. ವಿಶೇಷಾಧಿಕಾರಿಗಳು, ಮಾನ್ಯಕುಲಪತಿಗಳ ಆಪ್ತ ಶಾಖೆ, ಕರಾಮುವಿ, ಮೈಸೂರು
5. ನೋಡಲ್ ಆಫೀಸರ್ ವೆಬ್‌ಸೈಟ್ ನಿರ್ವಹಣೆ ಕರಾಮುವಿ, ಮೈಸೂರು.
6. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
7. ಕಚೇರಿ ಪ್ರತಿ.